೪) ಬೀದರ್ ಟೌನಿನಲ್ಲಿ ವಿಶೇಷ ಪೌಷ್ಟಿಕ ಆಹಾರ ಯೋಜನೆಯು ಜಾರಿಯಲ್ಲಿದ್ದು ಇದರಿಂದ ೬ ವರ್ಷಕ್ಕಿಂತ ಕೆಳಗಿರುವ ಮಕ್ಕಳು ಗರ್ಭಿಣಿ ಹಾಗೂ ಹಾಲುಣಿಸುವ ತಾಯಂದಿರಿಗೆ ಸೌಲಭ್ಯವಾಗಿದೆ.

(ಆ) ೧) ಈಗಾಗಲೇ ನಡೆಯುತ್ತಿರುವ ೫೦ ಶಿಶುಪಾಲನಾ ಕೇಂದ್ರಗಳ ಜೊತೆಗೆ ಇನ್ನೂ ೨೫ ಹೆಚ್ಚು ಕೇಂದ್ರಗಳನ್ನು ಪ್ರಾರಂಭ ಮಾಡಲಾಗುವುದು. ಪ್ರತಿ ಕೇಂದ್ರದಲ್ಲಿ ೨೫ಮಕ್ಕಳಿಗೆ ಸೌಲಭ್ಯ ದೊರೆಯುತ್ತದೆ.

೨) ಚುಚ್ಚು ಮದ್ದು ಕಾರ್ಯಕ್ರಮದಲ್ಲಿ ೧೦೦ಕ್ಕೆ ೧೦೦ ಗುರಿಯನ್ನು ಮುಟ್ಟಲು ಯೋಜನೆ ಹಾಕಿಕೊಳ್ಳಲಾಗಿದೆ. ಇದುವರೆಗೆ ೯೦ (ಶೇಕಡಾ) ಚುಚ್ಚುಮದ್ದಿನ ಗುರಿಯನ್ನು ತಲುಪಿದ್ದು ಇದರಿಂದ ಮಕ್ಕಳಿಗೆ ಹಾಗೂ ಬಸುರಿ ಹೆಂಗಸರಿಗೆ ಸೌಲಭ್ಯವಾಗಿದೆ.

೩) ಹೈದರಾಬಾದ್ ಕರ್ನಾಟಕದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ ಈ ಕೆಳಕಂಡಂತೆ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

	ಮಕ್ಕಳು	ಹೆಂಗಸರು
ಬೀದರ್ ಜಿಲ್ಲೆ	೬೧,೭೪೧	೧೨,೪೧೯
ರಾಯಚೂರು ಜಿಲ್ಲೆ	೧೯,೭೦೧	೪,೮೭೯
ಗುಲ್ಬರ್ಗಾ	೫೩,೩೮೦	೧೦,೦೮೯

ಇದಲ್ಲದೆ ಬೀದರ್ ಸಮಗ್ರ ಗ್ರಾಮೀಣಅಭಿವೃದ್ಧಿ ಯೋಜನೆಯಡಿಯಲ್ಲಿ ವಿವಿಧ ಚಟುವಟಿಕೆಗಳಲ್ಲಿ ಒಟ್ಟು ೧೪೯೦ ಮಹಿಳೆಯರು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ನೀಡಲಾದ ಉತ್ತರಗಳು ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಉತ್ತರಗಳ ಪಟ್ಟಿಯನ್ನು ಮಂಡಿಸಲಾಯಿತು.

ಮುಳುಬಾಗಿಲು ತಾಲ್ಲೂಕಿನ ನೀರಾವರಿ ಯೋಜನೆಗಳು

೯೨ (೭೩೮) ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲು).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮುಳುಬಾಗಿಲು ತಾಲ್ಲೂಕಿನಲ್ಲಿ ಸವೀಕ್ಷೆ ನಡೆಸಲಾಗಿರುವ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು ?

ಆ) ಈ ಯೋಜನೆಗಳನ್ನು ೧೯೮೫-೮೬ ಆರ್ಥಿಕ ವರ್ಷದಲ್ಲಿ ಕೈಗೊಳ್ಳಲಾಗುವುದೇ ? ಹಾಗಿಲ್ಲದಿದ್ದಲ್ಲಿ ಈ ಯೋಜನೆಗಳನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೫ ಕೆಲಸಗಳು ಅವು ಯಾವುವೆಂದರೆ :

೧) ಕುರುಡುಮಲೆ ಹತ್ತಿರ ಒಡೆದಿರುವ ಓಬಳಕೆರೆ ಬದಲಾಗಿ ಹೊಸಕೆರೆ ನಿರ್ಮಾಣ.

೨) ಕುನ್ನಿಬಂಡೆಹಳ್ಳಿಹತ್ತಿರ ಒಡೆದಿರುವ ರಘುನಾಥಕುಂಟಿ ಕೆರೆ ಬದಲಾಗಿ ಹೊಸಕೆರೆ ನಿರ್ಮಾಣ.

೩) ದೊಡ್ಡಗುರ್ಕಿ ಹತ್ತಿರ ಒಡೆದಿರುವ ಕೆರೆಗೆ ಬದಲಾಗಿ ಹೊಸಕೆರೆ ನಿರ್ಮಾಣ.

೪) ಗೋಪಸಂದ್ರ ಬಳಿ ಒಡೆದಿರುವ ಗುರಿಕಾನುಕುಂಟೆ ಬದಲಾಗಿ ಹೊಸಕೆರೆ ನಿರ್ಮಾಣ.

೫) ತಾಯಲೂರ್ ಹೋಬಳಿ, ಗೌಡನಕೆರೆಯಿಂದ ರಾಗಿಮಾನುದಿನ್ನೆ ಕೆರೆಗೆ ಫೀಡರ್ ಕಾಲುವೆ ನಿರ್ಮಾಣ.

ಅ) ಇಲ್ಲ. ಯೋಜನೆಗಳು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಶಕ್ಯವೆನಿಸಿದರೆ, ಆಯ ವ್ಯಯದಲ್ಲಿ ಸೇರಿಸಿದ ನಂತರ, ಆಗತ್ಯಕ್ರಮ ಕೈಗೊಳ್ಳಲಾಗುವುದು.

ಗುಲ್ಬರ್ಗದಲ್ಲಿ ಅರಣ್ಯಕ್ಕಾಗಿ ಕಾದಿರಿಸಿಟ್ಟ ಜಮೀನಿನ ಬಗ್ಗೆ

೯೩ (೩೮೧) ಶ್ರೀ ಕೆ.ಬಿ. ಶಾಣಪ್ಪ (ಶಹಬಾದ್).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಅರಣ್ಯ ಇಲಾಖೆಗಾಗಿ ಕಾದಿರಿಸಲಾಗಿರುವ ಜಮೀನಿನ ವಿಸ್ತೀರ್ಣ ವೆಷ್ಟು ?

ಆ) ೧೯೫೩–೫೪ ಮತ್ತು ೧೯೫೪–೫೫ನೇ ಸಾಲುಗಳಲ್ಲಿ ಈ ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ಸಸಿಗಳನ್ನು ನೆಡಲಾಗಿದೆ ಮತ್ತು ಯಾವ ಯಾವ ಹೊಸ ತಳಿಗಳನ್ನು ಉಪಯೋಗಿಸಲಾಗಿದೆ?

ಇ) ಶಹಬಾದ್ ಕ್ಷೇತ್ರದಲ್ಲಿನ ಎಷ್ಟು ರಸ್ತೆಗಳ ಉಭಯ ಪಾರ್ಶ್ವಗಳಲ್ಲಿ ಸಸಿಗಳನ್ನು ನೆಡ ಲಾಗಿದೆ ಮತ್ತು ಪ್ರಸಕ್ತ ಸಾಲಿನಲ್ಲಿ ಸದರಿ ಉದ್ದೇಶಕ್ಕಾಗಿ ಎಷ್ಟು ಎಕರೆ ಜಮೀನನ್ನು ಈ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಉದ್ದೇಶಿಸಿದೆ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಅರಣ್ಯ ಇಲಾಖೆಗಾಗಿ ಕಾದಿರಿಸಲಾಗಿರುವ ಜಮೀನಿನ ವಿಸ್ತೀರ್ಣ ೧,೩೨,೭೨೪ ಹೆಕ್ಟೇರುಗಳು.

ಆ) ೧೯೫೩–೫೪ರಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ೬೨೪ ಹೆಕ್ಟೇರುಗಳಲ್ಲೂ ಮತ್ತು ೧೯೫೪–೫೫ರಲ್ಲಿ ೭೮೬.೫ ಹೆಕ್ಟೇರುಗಳಲ್ಲಿ ಸಸಿಗಳನ್ನು ನಡೆಸಲಾಗಿದೆ. ಬಾಗೆ ಫೆಲೋಪೆಫಾರಂ, ಸಂಕೇಶ್ವರ, ಸಿಸ್ಸು, ಬೇವು, ಹುಣಸೆ, ಕರಿಜಾಲಿ ಮತ್ತು ನೀಲಗಿರಿ ಇತ್ಯಾದಿ ಜಾತಿಯ ಉತ್ತಮ ತಳಿಗಳನ್ನು ಉಪ ಯೋಗಿಸಲಾಗಿದೆ.

ಇ) ಈ ಕೆಳಕಂಡ ರಸ್ತೆಗಳ ಉಭಯ ಪಾರ್ಶ್ವಗಳಲ್ಲಿ ೧೯೫೩–೫೪ ಮತ್ತು ೧೯೫೪–೫೫ರಲ್ಲಿ ಗಿಡ ಗಳನ್ನು ನೆಡಲಾಗಿದೆ. ೧೯೫೩–೫೪ರಲ್ಲಿ ಸಣ್ಣೂರು ಶಹಬಾದ್ ರಸ್ತೆ. ೭½ ಕಿಲೋಮೀಟರು ೧೯೫೪–೫೫ರಲ್ಲಿ ೧೫ ಕಿಲೋಮೀಟರು ರಸ್ತೆಗಳ, ಉಭಯಪಾರ್ಶ್ವಗಳಲ್ಲಿ ಸಸಿಗಳನ್ನು ನೆಡಲಾಗಿದೆ.

೧)	ಶಹಬಾದ್–ಜವರಗಿ	೭ ಕಿ.ಮೀ.
೨)	ಲದ್ದಾಪುರ–ವಾಡಿರಸ್ತೆ	೩ ,,
೩)	ಭೀಮ–ಗುಲ್ಬರ್ಗ	೩ ,,
	ಒಟ್ಟು	೧೩ ಕಿ.ಮೀ.

ಪ್ರಸಕ್ತ ಸಾಲಿನಲ್ಲಿ ಸದರಿ ಉದ್ದೇಶಕ್ಕಾಗಿ ಒಟ್ಟು ೪೩ ಕಿ.ಮೀ. ರಸ್ತೆಯ ಉಭಯ ಪಾರ್ಶ್ವಗಳಲ್ಲಿನ ಸಸಿಗಳನ್ನು ನೆಡಲು ಉದ್ದೇಶಿಸಲಾಗಿದೆ.